ಎ.ಎನ್. ಮೂರ್ತಿರಾವ್ ಕ್ಲಾಸಿನಲ್ಲೆಲ್ಲಾ ಬಹಳ ಗಂಭೀರ. ನಮ್ಮನ್ನು ಸ್ವಲ್ಪ ಡಿಸ್ಟೆನ್ಸ್‌ನಲ್ಲಿ ಇಡ್ತಾ ಇದ್ದರು. ಕ್ಲಾಸಿನಲ್ಲಿ ಟೀಚರ್ಸ್ ಕನ್ನಡ ಮಾತಾಡೋದು ಕಡಿಮೆ. ವಿ.ಸೀ. ನಮ್ಮ ಜೊತೆ ಕನ್ನಡಾನೇ ಮಾತಾಡ್ತಿದ್ದಿಲ್ಲ ಕಾಲೇಜಿನಲ್ಲಿ. ಮನೆಗೆ ಹೋಗಿ ಜನಿವಾರ ಹಾಕ್ಕೊಂಡು ಪೂಜೆ ಮಾಡೋರು. ಆವಾಗ ನಮಗೆಲ್ಲಾ ಹಳೇ ಪ್ರೊಫೆಸರ್‌ಗಳ ಹತ್ರ ಟೆಸ್ಟಿಮನಿ ತಗೊಳೊ ಚಟ ಇತ್ತು. ಒಂದ್ಸಲ ಅನಂತರಾಮಯ್ಯನವರ ಮನೆಗೆ ಹೋದೆ. ಟೆಸ್ಟಿಮನಿ ಬರೆದುಕೊಟ್ರು. 'ಹೇಗಿದ್ದೀರಿ? ಚೆನ್ನಾಗಿದ್ದೀರಾ? ಎಲ್ಲಿದ್ದೀರಿ' ಅಂತ ಕನ್ನಡದಲ್ಲಿ ವಿಚಾರಿಸಿಕೊಂಡರು. ಇಟ್ ವಾಸ್ ಸಚ್ ಎ ಶಾಕ್ ಟು ಮಿ. ಅವರು ಕನ್ನಡ ಮಾತಾಡ್ತಾರೆ ಅಂತಾ ನನಗೆ ಗೊತ್ತೇ ಇರಲಿಲ್ಲ.

◆ **ಲಂಕೇಶ್ ಜತೆ ನಿಮ್ಮ ಸಂಬಂಧ ಹೇಗಿತ್ತು?**

ಲಂಕೇಶ್ ಪತ್ರಿಕೆಯಲ್ಲಿ 'ಕುಂಟ. ಬುದ್ಧಿವಂತ. ಬಹಳ ಓದಿಕೊಂಡಿದ್ದಾನೆ. ಆಶ್ಚರ್ಯ ಅಂದರೆ ಆ ಬಗ್ಗೆ ಅವನು ಯಾವಾಗಲೂ ಚಿಂತೆ ಮಾಡುತ್ತಿರಲಿಲ್ಲ. ಅವನಿಗೆ ಎಲ್ಲಿಂದ ಬಂತೋ ಈ ಶಕ್ತಿ' ಅಂತೆಲ್ಲ ಬರೆದಿದ್ದರು. ಲಂಕೇಶ್ ತನ್ನ ಬಗ್ಗೆ ಎಷ್ಟೇ ನೆಗಟಿವ್ ಇಂಪ್ರೆಶನ್ ಬಂದರೂ ಹೆದರ್ತಾ ಇರಲಿಲ್ಲ. ಜೂಜಾಟ, ಕುಡಿತದ ಬಗ್ಗೆ ಹೇಳಿಕೊಂಡಿದ್ದಾರೆ. ಅವರ ಆತ್ಮಕತೆ ಪ್ರಾಮಾಣಿಕವಾಗಿದೆ. ಅವನಿಗೆ ಕುಡಿಯೋದನ್ನು ಹೇಳಿಕೊಟ್ಟೋನು ನಾನೇ ಅಂತಲೂ ಬರೆದುಕೊಂಡಿದ್ದರು. ನೀವು ಒಪ್ಪತೀರೊ ಇಲ್ಲವೊ, ಎಷ್ಟೊ ವೆಸ್ಟರ್ನ್ ಲೇಖಕರು ಪರ್ಸನಲಿ ಅಫೆನ್ಸಿವ್ ಡಿಸ್‌ಗಸ್ಟಿಂಗ್, ಹಾರಿಬಲ್ ಫೆಲೋಸ್. ಬಟ್ ದೈರ್ ರೈಟಿಂಗ್ ಈಸ್ ಎಕ್ಸಲೆಂಟ್. ನಮ್ಮ ಜನ ಇದು ಸಾಧ್ಯವಿಲ್ಲ ಅಂತಾರೆ. ಇಫ್ ಹಿ ಈಸ್ ಗುಡ್ ಪರ್ಸನ್, ಅಡ್ಮೈರ್ ಹಿಸ್ ರೈಟಿಂಗ್ ಅಂತಾರೆ. ಬಟ್ ಐ ಡೋಂಟ್ ಥಿಂಕ್ ಸೊ. ವೈ ಹಿ ಆರ್ ಶಿ ಶುಡ್ ಬಿ ಗುಡ್? ರೈಟರ್ಸ್ ಆರ್ ಡೀಪ್ಲಿ ಫ್ರಾಡ್ ಪರ್ಸನ್ಸ್. ಪೊಲಿಟಿಕಲಿ ಕರೆಕ್ಟ್ ಜನ ಅಲ್ಲ. ಐ ಆಲ್ವೇಸ್.

◆ **ಧಾರವಾಡದ ನೆನಪುಗಳು ಇವೆಯಾ?**

ಪ್ರೊ. ಮನೆಜೆನೆಸ್ ವಾಸ್ ಎ ಗುಡ್ ಸ್ಕಾಲರ್. ಗುಡ್ ಟೀಚರ್. ಅವರ ಕಡೆ ಪಿಎಚ್.ಡಿ. ಮಾಡಿದೆ. ಆಗ ಕಾಲೇಜು ಟೀಚರಿಗೆ ಬಹಳ ಗೌರವವಿತ್ತು. ಚಂಪಾ ಸ್ಟೂಡೆಂಟ್ ಆಗಿದ್ದ. ಆತ ಬರೆಯೋ ಸಂಪಾದಕೀಯ ಆಲ್ವೇಸ್ ರೀಡಬಲ್. ಅವನು ಬೇರೆಯವರನ್ನು ಗೇಲಿ ಮಾಡೋದಕ್ಕಿಂತ ತನ್ನನ್ನು ಗೇಲಿಮಾಡಿಕೊಂಡಾಗಲೆಲ್ಲ ಬಹಳ ಚೆನ್ನಾಗಿರುತ್ತದೆ.

◆ **ಬೇಂದ್ರೆಯವರನ್ನು ಭೇಟಿ ಮಾಡುತ್ತಿದ್ದಿರಾ?**

ಒಂದೇ ಸಲ ಭೇಟಿ ಮಾಡಿದೀನಿ. ರಸ್ತೆಯಲ್ಲಿ ಹೋಗ್ತಿರುವಾಗ ನಮಸ್ತೆ ಮಾಡತಿದ್ವಿ. ಅವರ ಪೊಯೆಟ್ರಿ ಚೆನ್ನಾಗಿದೆ. 'ಅಣ್ಣಗಳಿರಾ ಅನ್ನದಲ್ಲಿ ಮಣ್ಣು ಕಲೆಸದಿರಿ' ಅಂತ ಸಾಲು ನೆನಪಿದೆ. ಸಮ್‌ಟೈಮ್ಸ್ ಮ್ಯೂಜಿಕ್ ಈಸ್ ಸೋ ಪವರ್‌ಫುಲ್ ಇನ್ ಹಿಸ್ ಪೊಯೆಟ್ರಿ, ನಿಂತು ಯೋಚನೆ ಮಾಡಿದರೆ ಏನು ಹೇಳ್ತಾರೆ ಅನ್ನೋದು ಗೊತ್ತಾಗೋದಿಲ್ಲ. ಅರ್ಥ ಏನೋ ಇರಬಹುದು ಅಂತ ಅಂದುಕೊಳ್ತೀವಿ. ಅಷ್ಟು ಪವರ್‌ಫುಲ್ ಲಾಂಗ್ವೇಜ್. ನನಗೆ ಯಾವಾಗಲೂ ಒಳ್ಳೇದಕ್ಕೊ ಕೆಟ್ಟದ್ದಕ್ಕೊ, ನನ್ನ ಯುಕ್ತಿಸಂಪನ್ನ ಮನಸ್ಸಿದೆಯಲ್ಲಾ, ಅದು ಯಾವಾಗಲೂ ಎಚ್ಚರ ಇರುತ್ತೆ.

◆ **ನೀವು ನವ್ಯ ಲೇಖಕರು. ನಿಮ್ಮ ಇಷ್ಟದ ಲೇಖಕರೆಲ್ಲ ಕ್ಲಾಸಿಕಲ್ ಪರಂಪರೆಯವರು. ಪಂಪ, ಕುಮಾರವ್ಯಾಸ...**

ಐ ಲೈಕ್ ಪಂಪಾಸ್ ಪೊಯಿಟ್ರಿ. ಎಷ್ಟು ರಸ ಇದೆ ಅದರಲ್ಲಿ – ಭೀಭತ್ಸ, ರೊಮ್ಯಾನ್ಸ್, ತಮಾಷೆ, ಎಲ್ಲಾ ಇದೆ. ಭೀಮ ಯುದ್ಧಭೂಮಿಯಲ್ಲಿ ದುಶ್ಯಾಸನನ ಹಲ್ಲು ಕಿತ್ತು ದ್ರೌಪದಿಯ ತಲೆಬಾಚಿ ಒಂದು ಸ್ಮೈಲ್ ಕೊಡೋ ಭಾಗ ನೋಡಿ. ದ ಪವರ್ ಆಫ್ ಲಾಂಗ್ವೇಜ್ ಎಷ್ಟು ಚೆನ್ನಾಗಿದೆ. (ಪುಸ್ತಕ ತೆಗೆದು ದುಶ್ಯಾಸನ ವಧೆಯ ಭಾಗವನ್ನು ಓದಿ ವಿವರಿಸುತ್ತ) – ಭೀಮ ಹೆಣ ತಿಂತಿದಾನೆ ಸ್ವಾಮಿ, ಕ್ಯಾನಿಬಾಲಿಸಂ.

◆ **ನಿಮಗೆ ನಾಗರಿಕ ಸಮಾಜ ರೂಢಿಸಿಕೊಂಡಿರುವ ಸಭ್ಯ ಪರಿಭಾಷೆಯ ಬಗ್ಗೆ ಯಾವಾಗಲೂ ಕೋಪ. ಭಾಷೆಯ ಸೌಮ್ಯೀಕರಣ ಕೃತಕತೆ ಆಗುತ್ತೆ ಅಂತಲಾ?**

ಯೆಸ್, ಐ ಡೋಂಟ್ ಲೈಕ್ ಯೂಫೇಮಿಸಮ್.